# ತೂಕದ ನೆಲೆ


ಸಂಪಾದಕರು

ಡಾ. ಶಿವಲಿಂಗಪ್ಪ. ಆಯ್. ಭಂಡಾರಿ

ಡಾ. ತಿಪ್ಪೇಸ್ವಾಮಿ. ಡಿ. ಎಸ್




# ತೂಕದ ನೆಲೆ

(ವಿಮರ್ಶಾ ಲೇಖನಗಳು)

ಡಾ. ಶಿವಲಿಂಗಪ್ಪ ಆಯ್. ಭಂಡಾರಿ

ಎಂ.ಎ.ಪಿಹೆಚ್.ಡಿ

ಡಾ. ತಿಪ್ಪೇಸ್ವಾಮಿ ಡಿ. ಎಸ್.

ಎಂ.ಎ.ಪಿಹೆಚ್.ಡಿ

ಪ್ರಕಾಶಕರು

ಎಸ್.ಎಲ್.ಎನ್. ಪಬ್ಲಿಕೇಷನ್

[illegible] 437, 4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಶಾಸ್ತ್ರೀನಗರ

ಬನಶಂಕರಿ 2ನೇ ಹಂತ, ಬೆಂಗಳೂರು-29

ಮೊ : 9972129376

umeshnagamangala@gmail.com

| | | |
|---|---|---|
| **ತೂಕದ ನೆಲೆ** | : | ವಿಮರ್ಶಾ ಲೇಖನಗಳು |
| ಲೇಖಕರು | : | **ಡಾ. ತಿಪ್ಪೇಸ್ವಾಮಿ ಡಿ. ಎಸ್.**<br>ಹುನಗುಂದ, ಬಾಗಲಕೋಟೆ<br>ಡಾ. ಶಿವಲಿಂಗಪ್ಪ ಆಯ್. ಭಂಡಾರಿ<br>ಸಿಂಧಗಿ, ವಿಜಯಪುರ |
| **ಪ್ರಕಾಶಕರು** | : | **ಎಸ್.ಎಲ್.ಎನ್. ಪಬ್ಲಿಕೇಷನ್**<br>ನಂ. 3437, 4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ,<br>ಶಾಸ್ತ್ರೀನಗರ, ಬನಶಂಕರಿ 2ನೇ ಹಂತ,<br>ಬೆಂಗಳೂರು–29. ಮೊ : 9972129376 |
| **ISBN** | : | **978-81-948128-7-6** |
| ಪ್ರಥಮ ಮುದ್ರಣ | : | 2020 |
| ಅಳತೆ | : | 1/8 ಡೆಮ್ಮಿ |
| ಕಾಗದದ ಬಳಕೆ | : | 70 ಜಿ.ಎಸ್.ಎಂ. ಮ್ಯಾಪ್ಲಿಥೋ |
| ಪುಟಗಳು | : | xii+296=308 |
| ಹಕ್ಕುಗಳು | : | ಲೇಖಕರದ್ದು |
| ಪ್ರತಿಗಳು | : | 1000 |
| ಬೆಲೆ | : | **ರೂ. 300–00** |
| ಮುಖಪುಟ ವಿನ್ಯಾಸ | : | ಕೆ.ಕೆ. ಮಕಾಳಿ. ಹಂಪೆ |
| ಅಕ್ಷರ ಜೋಡಣೆ | : | ಸಹನಾ ಗ್ರಾಫಿಕ್ಸ್, ಬೆಂಗಳೂರು. 9342196255 |
| ಮುದ್ರಣ | : | ಓಂ ಶ್ರೀ ಪ್ರಿಂಟರ್ಸ್, ಕಸ್ತೂರಿ ಬಾ ನಗರ<br>ಬೆಂಗಳೂರು |

# ಪರಿವಿಡಿ

**ಮುನ್ನುಡಿ**

**ಲೇಖಕರ ಮಾತು**

**ಪ್ರಕಾಶಕರ ಮಾತು**

1. ಚಾಮರಸನ ಪ್ರಭುಲಿಂಗಲೀಲೆ : ಒಂದು ಸಂಸ್ಕೃತಿಕ ಅಧ್ಯಯನ.
   – **ಡಾ.ರಾಜಶೇಖರ ಬಸುಪಟ್ಟದ**
2. ಹಯವದನ : ಸಂಪ್ರದಾಯ ಮತ್ತು ಆಧುನಿಕತೆ
   – **ಡಾ. ಶ್ರೀಶೈಲ ಆರ್. ಗೋಲಗೊಂಡ**
3. ಪಂಪನ ಪ್ರತಿನಾಯಕ ಕರ್ಣ
   – **ಡಾ. ಮುರ್ತುಜಾ ಬ. ಒಂಟಿ**
4. ಅಕ್ಕನ 'ತನು ಕರಗದವ'ರಲ್ಲಿ
   – **ಪ್ರೊ.ಜಿ.ಜಿ.ಹಿರೇಮಠ**
5. 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿ–ಒಂದು ಅನುಸಂಧಾನ
   –**ಶ್ರೀ ಚಂದ್ರಶೇಖರ ಹೆಗಡೆ**
6. ಕುವೆಂಪುರವರ ಕಥನ ಕವನಗಳ ಅವಲೋಕನ
   – **ಡಾ.ಯಮುನಪ್ಪ ಸಂ. ಹೊಸಮನಿ.**
7. ಕಂಪ್ಯೂಟರ್ ಯುಗ ಮತ್ತು ಸೃಜನಶೀಲತೆ
   – **ಡಾ.ಮೋಹನ ಚಂದ್ರಗುತ್ತಿ**

8. ಹೊಸ ತಲೆಮಾರಿನ ಕಾವ್ಯಗಳಲ್ಲಿ ಪ್ರೀತಿ-ಪ್ರೇಮ-ಪ್ರಣಯ
**– ಡಾ. ಶಿವಲಿಂಗಪ್ಪ ಆಯ್.ಭಂಡಾರಿ**

9. ಬಳ್ಳಾರಿ ಜಿಲ್ಲೆಯ ಜನಪದ ಗೀತ ಸಂಪ್ರದಾಯಗಳು
**–ಡಾ. ವ್ಹಿ.ಬಿ.ಸಣ್ಣಸಕ್ಕರಗೌಡರ**

10. ಗ್ರಾಮೀಣ ಭಾಷಾ ಪ್ರಾದೇಶಿಕತೆ ಮತ್ತು ಸಮೂಹ ಮಾಧ್ಯಮಗಳು
**– ಡಾ. ತಿಪ್ಪೇಸ್ವಾಮಿ ಡಿ.ಎಸ್**

11. ಆತ್ಮಕಥೆಗಳಲ್ಲಿ ದಲಿತ ಸಂಘರ್ಷ
**–ಡಾ. ಎಸ್.ಬಿ. ರಾಠೋಡ**

12. ಕನಕದಾಸರ ಕೀರ್ತನೆಗಳಲ್ಲಿ ಭಕ್ತಿಯ ಸ್ವರೂಪ
**– ಪ್ರೊ. ಮಲ್ಲಿಕಾರ್ಜುನ ಬೀರಣ್ಣ**

13. ಕರ್ನಾಟಕ ಸಂಸ್ಕೃತಿ ಒಂದು ಹೆಮ್ಮೆ
**– ಪ್ರೊ. ಡಿ. ಎಂ. ನಾಯ್ಕ**

14. 'ಶೂದ್ರ ತಪಸ್ವಿ' ನಾಟಕದ ವಿವೇಚನೆ
**– ಡಾ. ಮುರ್ತುಜಾ ಬ. ಒಂಟಿ**

15. ಸತ್ಯ ಶೋಧಕ: ಎಂ. ಎಂ. ಕಲಬುರ್ಗಿ
**– ಡಾ. ಪ್ರಕಾಶ ಎನ್. ನರಗುಂದ**

16. ದಲಿತರು ಮತ್ತು ಭೂ ಹೋರಾಟಗಳು
**– ಡಾ. ಎಚ್. ಕುಮಾರಸ್ವಾಮಿ ಹೆಗಡೆ**

17. ಕಲೆಗಾಗಿ ಕಲೆ ಜನಪದರ ಜೀವನದ ಚಿತ್ರಕಲೆ
**– ಡಾ. ತಿಪ್ಪೇಸ್ವಾಮಿ ಡಿ.ಎಸ್**

18. ಪಾತ್ರೋಟರ ಸಾಧನೆ ಮತ್ತು ದಾರಿಗಳು
**–ಸಿದ್ದಪ್ಪ ಮಾದರ(ಸಿತಿಮಾ ವಜ್ಜಲ)**

19. ಭಕ್ತಿ ಪರಂಪರೆ ಮತ್ತು ಕನ್ನಡ ಕಾವ್ಯ
**– ಡಾ. ಬಸವರಾಜ ಸಾಲವಾಡಗಿ**

20. ಓಮುಕಣಿವೆಯ ಅನುಭಾವಿ ಕವಿ ಲಲ್ಲೇಶ್ವರಿ : ಒಂದು ಚಿಂತನೆ
**– ಪ್ರೊ. ಶ್ರೀಮತಿ.ಜಯಶೀಲ ಎಂ. ಎನ್**

21. ಲಿಂಗಾಚಾರ
**– ಡಾ. ನಾಗರತ್ನಾ.ಅ.ಭಾವಿಕಟ್ಟಿ**

22. ನಿಜಗುಣಶಿವಯೋಗಿ
**– ನೆಲಾಗಣಿ ಮಹಾಂತೇಶ ಬಸಪ್ಪ**

23. ಮ್ಯಾಸಬೇಡರ ಸಂಸ್ಕೃತಿ (ಮೊಳಕಾಲ್ಮೂರು ತಾಲೂಕಿನ ಸಾಂಸ್ಕೃತಿಕ ಚಟುವಟಿಕೆಗಳು) **– ಸಣ್ಣ ಮಲ್ಲಯ್ಯ .ಬಿ**

24. ಬ್ಯಾಕೂಡ ಪಾಟೀಲ ಸಹೋದರರ ಚಳುವಳಿಗೆ ತತ್ತರಿಸಿದ ಬ್ರಿಟಿಷರು
**– ಸಂತೋಷ ಕೃ. ಮಾನೆ**

25. ಪುರಂದರದಾಸರು ಕಂಡ ಹೆಣ್ಣು
**– ಡಾ. ರೇಣುಕಾ. ಶಂ. ಹೆಬ್ಬಾಳ**

26. ಕನ್ನಡ ಹವ್ಯಾಸಿ ರಂಗಭೂಮಿ.
**– ಪ್ರೊ. ಶ್ರೀಮತಿ. ಟಿ. ಎಸ್. ಮಂಗಾಜಿ**

27. ದಲಿತ ಬಂಡಾಯ ಕಾವ್ಯಗಳಲ್ಲಿ ಮಾನವೀಯ ಪ್ರಜ್ಞೆ
**– ಡಾ. ಎಂ.ಆರ್. ದೊಡಮನಿ**

28. ಭಕ್ತಿಯ ಸಿರಿ–ಕಾಡಸಿದ್ಧೇಶ್ವರ ಮಠ ಸಿದ್ಧಗಿರಿ
**– ಪ್ರೊ.ರಾವಸಾಬ ಅ. ಬಡಿಗೇರ**

29. ಹುನಗುಂದ ತಾಲೂಕಿನ ಶಾಸನಗಳ ವೈವಿಧ್ಯತೆ : ಸಂರಕ್ಷಣೆ
**– ಪ್ರೊ. ಎಸ್.ಆರ್.ನಾಗಣ್ಣವರ**

30. ಆಧುನಿಕ ಕನ್ನಡ ಕವಿಯಿತ್ರಿಯರ ಅಭಿವ್ಯಕ್ತಿ ಕ್ರಮ
**– ಡಾ. ಶಿವಲಿಂಗಪ್ಪ ಆಯ್. ಭಂಡಾರಿ**

## Title- Shudra Tapasvi: Criticism

- Dr. M. B. Onti

# 'ಶೂದ್ರ ತಪಸ್ವಿ' ನಾಟಕದ ವಿವೇಚನೆ

– ಡಾ. ಮುರ್ತುಜಾ ಬಿ. ಒಂಟಿ

"ಯುಗದ ಕವಿ ಜಗದ ಕವಿ" ಎಂದು ಸ್ತುತರಾದ ರಾಷ್ಟ್ರಕವಿ ಕುವೆಂಪು ಅವರು ಹೊಸಗನ್ನಡದ ಸಾಹಿತ್ಯದ ಧೀಮಂತ ಶಕ್ತಿ ಎನಿಸಿದ್ದಾರೆ. ಬಹುಮುಖ ವ್ಯಕ್ತಿತ್ವದ ಪುಟ್ಟಪ್ಪನವರು ಆಧುನಿಕ ಕನ್ನಡ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಅನನ್ಯವಾದುದು. ಕಾವ್ಯ, ನಾಟಕ, ಕಾದಂಬರಿ, ವಿಮರ್ಶೆ, ವೈಚಾರಿಕ ಮೊದಲಾದ ಪ್ರಕಾರಗಳಲ್ಲಿ ಕಾಣಿಸಿಕೊಂಡ ಅವರ ಅಭಿವ್ಯಕ್ತಿ ಶ್ರೀಮಂತಿಕೆಯಿಂದ ಕೂಡಿದೆ. ವೈಚಾರಿಕತೆ ಕುವೆಂಪು ಸಾಹಿತ್ಯದ ಜೀವ ದ್ರವ. ಪ್ರತಿಯೊಂದನ್ನು ವಿಚಾರಾತ್ಮಕವಾಗಿ ನೋಡುವ, ವಿಶ್ಲೇಷಿಸುವ ದೃಷ್ಟಿಕೋನ ಅವರದು. ತತ್ವಶಾಸ್ತ್ರ, ಮನಶಾಸ್ತ್ರ, ಗಣಿತ ವಿಷಯಗಳಲ್ಲಿ ಗಟ್ಟಿಯಾದ ಅನುಭವ ಹೊಂದಿದ್ದರು. ಈ ಹಿನ್ನಲೆಯಲ್ಲಿಯೂ ರಚಿತವಾದ ಅವರ ಸಾಹಿತ್ಯ ಗಮನಿಸಬೇಕಾದುದು.

ಪುರೋಹಿತಶಾಹಿ ವ್ಯವಸ್ಥೆಯ ವಿರುದ್ಧ ಸಮರ ಸಾರಿದ ಅವರ ಸಾಹಿತ್ಯ ನಮ್ಮ ಭಾರತೀಯ ಸನಾತನ ಧರ್ಮ ಪರಂಪರೆಯನ್ನು ವಿಡಂಬಿಸುತ್ತದೆ. ಶ್ರೀಸಾಮಾನ್ಯರ ಪರವಾದ ಧ್ವನಿಯನ್ನುಳ್ಳದ್ದು ಅವರ ಅಭಿವ್ಯಕ್ತಿ. ಹೀಗಾಗಿ ಅವರ ಸಾಹಿತ್ಯದಲ್ಲಿ ಜನಸಾಮಾನ್ಯರು, ಶೋಷಿತರು ರಾರಾಜಿಸುವುದನ್ನು ಕಾಣಬಹುದಾಗಿದೆ. ಪುಟ್ಟಪ್ಪನವರ ಕವಿತೆಗಳು, ನಾಟಕಗಳು, ಕಾದಂಬರಿಗಳು ಹಾಗೂ ಗದ್ಯಬರಹಗಳು ಮೇಲಿನ ಹೇಳಿಕೆಗೆ ಸಾಕ್ಷಿಯಾಗಿವೆ.

ಕುವೆಂಪು ಅವರ ಜನಪ್ರಿಯ ನಾಟಕಗಳಲ್ಲಿ "ಶೂದ್ರ ತಪಸ್ವಿ"ಯೂ ಒಂದು. ಪೌರಾಣಿಕ ಕಥಾವಸ್ತುವನ್ನೊಳಗೊಂಡ ನಾಟಕ. 1944ರಲ್ಲಿ ಪ್ರಕಟವಾದ ಅದು ಎಷ್ಟೊಂದು ಜನಪ್ರಿಯವಾಗಿದೆಂದರೆ 2016ರ ಹೊತ್ತಿಗೆ 13ನೇ ಮುದ್ರಣವನ್ನು ಕಂಡಿದೆ. "ದೃಶ್ಯರೂಪಿಯಾದರೂ ಅದು ಕಾವ್ಯಾತ್ಮಕವಾದುದು" ಎಂಬ ಅಭಿಪ್ರಾಯವನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಆದಿಕವಿ ವಾಲ್ಮೀಕಿ ವಿರಚಿತ "ರಾಮಾಯಣ"ದ ಉತ್ತರ ಕಾಂಡದ ಅನೇಕ ಪ್ರಕ್ಷಿಪ್ತಗಳಲ್ಲಿ "ಶಂಬೂಕ ವಧೆ ಪ್ರಸಂಗ"ವೂ ಒಂದು. ಆ ಕಥಾವಸ್ತುವನ್ನು ವಿನೂತನವಾಗಿ ಸೃಷ್ಟಿಸಿದುದು ಈ "ಶೂದ್ರ ತಪಸ್ವಿ" ನಾಟಕ. ಶ್ರೀಮದ್ ರಾಮಾಯಣದಲ್ಲಿ ಅಸ್ಪೃಶ್ಯ ಜಾತಿಗೆ ಸೇರಿದ ಶಂಬೂಕನು ತಪಸ್ಸು ಮಾಡಿದ ಪರಿಣಾಮವಾಗಿ ಬ್ರಾಹ್ಮಣನ ಮಗನು ಮರಣಹೊಂದಿದನಂತೆ. ಆ ವೈದಿಕನು ತನ್ನ ಮಗನ ಶವವನ್ನು ಹೊತ್ತುಕೊಂಡು ಅಯೋಧ್ಯಾಪುರದ ಅರಸನಾದ ಶ್ರೀರಾಮಚಂದ್ರನ ಬಳಿ ಬರುತ್ತಾನೆ. ಮಗನ ಅಕಾಲ ಮರಣಕ್ಕೆ ಕಾರಣನಾದ ಶೂದ್ರ ಶಂಬೂಕನನ್ನು ಕೊಂದು ಮಗನನ್ನು ಬದುಕಿಸಿಕೊಡು ಎಂದು ರಾಮನಲ್ಲಿ ಮೊರೆಯಿಡುತ್ತಾನೆ. ಪ್ರಜೆಯ ಕೋರಿಕೆಯನ್ನು ನೆರವೇರಿಸಲೆಂದು ಅರಸ, ಶಂಬೂಕನು ತಪಸ್ಸು ಮಾಡುತ್ತಿರುವ ಸ್ಥಳಕ್ಕೆ ಬಂದು ನೀನು ಯಾವ ವರ್ಣದಲ್ಲಿ ಹುಟ್ಟಿದವನು? ಸತ್ಯವನ್ನು ಹೇಳು ಎಂದು ಕೇಳಿದನು. ಆಗ ಶಂಬೂಕನು ತಾನು ಶೂದ್ರ ವರ್ಣದವನೆಂದು ತಿಳಿಸುವನು. ಅವನ ಮಾತು ಮುಗಿಯುವ ಮುನ್ನವೇ ಶ್ರೀರಾಮನ ಹರಿತವಾದ ಖಡ್ಗ ಶಂಬೂಕನ ತಲೆಯನ್ನು ಕಡಿದು ಹಾಕುತ್ತದೆ. ರಾಮನ ಈ ಕಾರ್ಯವನ್ನು ಕಂಡು ದೇವೇಂದ್ರ ಮೊದಲಾದ ದೇವತೆಗಳು ಮೆಚ್ಚಿ ಹೂಮಳೆಗರೆಯುತ್ತಾರೆ. ಈ ಶುಭ ಕಾರ್ಯಕ್ಕೆ ಇಂದ್ರನು ರಾಮನಿಗೆ ವರ ಕೇಳು ಎಂದಾಗ, ರಾಮ ಮರಣಹೊಂದಿದ ಬ್ರಾಹ್ಮಣ ಕುಮಾರನನ್ನು ಬದುಕಿಸಿ ಎಂದು ಕೇಳುವನು. ಆಗ ದೇವೇಂದ್ರನು ಶೂದ್ರನ ವಿನಿಪಾತವಾದೊಡನೆ ಕುಮಾರನು ಬದುಕಿದನು ಎಂದು ತಿಳಿಸುವನು.

ಮಹಾಕವಿ ವಾಲ್ಮೀಕಿಯ ರಾಮಾಯಣದ ಪ್ರಕ್ಷಿಪ್ತ ಭಾಗದಲ್ಲಿ ಬಂದಿರುವ ಈ ಕಥೆಯನ್ನು ಕೇಳಿ ಎಂಥ ಮೂರ್ಖನಾದರೂ ನಗುತ್ತಾನೆ.

ಸಂಸ್ಕೃತದ ಕವಿ ಭವಭೂತಿ ಕೂಡಾ ಇದೇ ಪ್ರಸಂಗವನ್ನು ಆಧರಿಸಿ "ಉತ್ತರ ರಾಮಚರಿತ" ಎಂಬ ನಾಟಕವನ್ನು ರಚಿಸಿದ್ದಾನೆ. ರಾಮಾಯಣದ

ಶಂಬೂಕನ ಕಥೆ ಭವಭೂತಿಗೆ ಅಸಹ್ಯವಾಗಿ ಕಂಡಿದೆ. ಅದಕ್ಕಾಗಿ ರಾಮನು ಶಂಬೂಕ ಮುನಿಯನ್ನು ಕೊಲ್ಲುವ ಸನ್ನಿವೇಶವನ್ನು ಸ್ವಲ್ಪ ವಿಭಿನ್ನವಾಗಿ ಚಿತ್ರಿಸಲು ಪ್ರಯತ್ನಿಸಿರುವನು. ಅದೇನೆಂದರೆ, ಬ್ರಾಹ್ಮಣನ ಅಳಲನ್ನು ಹೋಗಲಾಡಿಸಲು ಶ್ರೀರಾಮಚಂದ್ರನು ಶೂದ್ರ ಶಂಬೂಕನನ್ನು ಕೊಂದನು. ಆಗ ಶಂಬೂಕನ ಮೃತ ಶರೀರದಿಂದ ಗಂಧರ್ವನೊಬ್ಬನು ಕಾಣಿಸಿಕೊಂಡು ರಾಮನಿಗೆ ಧನ್ಯವಾದಗಳನ್ನು ಹೇಳುತ್ತ, ತಾನು ಒಂದು ಶಾಪದಿಂದ ಶೂದ್ರನಾಗಿ ಜನ್ಮತಾಳಿ ತಪಸ್ಸು ಮಾಡುತ್ತಿದ್ದುದಾಗಿಯೂ ರಾಮನ ಖಡ್ಗದಿಂದ ಹತನಾಗುವುದರ ಮೂಲಕ ತಾನು ಶಾಪ ವಿಮೋಚನನಾದೆನೆಂದು ತಿಳಿಸುವನು. ರಾಮನು ಅವನ ತಪೋಮಹಿಮೆಯನ್ನು ಕೇಳಿ ಸಂತೋಷಪಟ್ಟು ಅವನಿಗೆ (ಶಂಬೂಕನಿಗೆ) ಒಳ್ಳೆಯದಾಗಲಿ ಎಂದು ಹರಸುತ್ತಾನೆ.

ಒಬ್ಬ ಶೂದ್ರ ತಪಸ್ಸು ಮಾಡುವದಕ್ಕೂ ಬ್ರಾಹ್ಮಣನ ಮಗನು ಮರಣ ಹೊಂದುವದಕ್ಕೂ ಎತ್ತಣಿಂದೆತ್ತ ಸಂಬಂಧವಯ್ಯಾ! ಮಹಾಕಾವ್ಯಗಳೆ ಈ ರೀತಿ ಹೇಳಿದಾಗ ಸಮಾಜಕ್ಕೆ ತಪ್ಪು ಸಂದೇಶವನ್ನು ಕೊಟ್ಟಂತಾಗುವದಿಲ್ಲವೆ? ಎಂಬ ಪ್ರಶ್ನೆ ಓದುವರನ್ನು ಕಾಡುತ್ತದೆ.

ಶಂಬೂಕನ ಕಥೆಯನ್ನು ರಾಷ್ಟ್ರಕವಿ ಕುವೆಂಪು ಅವರು "ಶೂದ್ರ ತಪಸ್ವಿ" ನಾಟಕದಲ್ಲಿ ತುಂಬಾ ವಿನೂತನವಾಗಿ ಚಿತ್ರಿಸಿದ್ದಾರೆ. ಮೂರು ದೃಶ್ಯಗಳನ್ನೊಳಗೊಂಡ ನಾಟಕವಿದು. ಮೊದಲನೆಯ ದೃಶ್ಯದಲ್ಲಿ ಶಂಬೂಕನ ಆಶ್ರಮದ ವರ್ಣನೆ ಮತ್ತು ಭೈರವ ಹಾಗೂ ಮೃತ್ಯು ಇವರಿಬ್ಬರ ನಡುವಿನ ಸಂಭಾಷಣೆಯಿದೆ. ಮೃತ್ಯುವಿನ ಕರಾಳಾಕೃತಿಯನ್ನು ಕಂಡು ಭೈರವನು "ಆರ್ ನೀನ್! ನಿನಗೇನಿಲ್ಲಿ ಕಜ್ಜೋ ಘೋರಮುಖಿ?" ಎಂದು ಪ್ರಶ್ನಿಸಿದಾಗ ಭಯಂಕರ ಧ್ವನಿಯಿಂದ ಮೃತ್ಯು "ಪೆಸರ್‌ಗೇಳ್ವ ಕೆಚ್ಚೆರ್ಪುದೇನ ನಿನಗೆ? ಎಂದು ಭೈರವನಿಗೆ ಮರು ಪ್ರಶ್ನೆ ಹಾಕುವ ಮೂಲಕ ಸಂಭಾಷಣೆ ಮುಂದುವರೆಯುತ್ತದೆ. ಭೈರವನು ಭಯಂಕರನಾಗಿ "ಮಹರ್ಷಿ ಶಂಭೂ ದೇವನಾಣೆ! ಕಲ್ಲವೊಲ್ ನಿಲ್ಲು ನೀನ್! ಪವಿತ್ರವಾದ ಶಂಬೂಕನ ವನವನ್ನು ಪ್ರವೇಶಿಸಲು ಅವಕಾಶ ಕೊಡುವದಿಲ್ಲವೆಂದನು. ಆಗ ಮೃತ್ಯು "ಎಲೆ ಮರುಳೆ ಕೇಳ್ ಶಂಬೂಕ ಋಷಿಯ ಗೌರವಕ್ಕಾಗಿ ಬಂದೆನಯ್, ಧರ್ಮದೇವಯಾಜ್ಞೆಯಿಂ. ನೀನ್ ಆತನ ಮೆಯ್‌ಗಾವಲ್:

ನಾನ್ ಯಾರಿಗೇನು ಕೇಡಿದೆನೆ ದೇವರು ಕೇಡು ಬಗೆದನೋ———” ಎಂದು ಪ್ರಲಾಪಿಸಿದನು.

ಒಂದಿನ ದ್ವಾರದಲ್ಲಿ ಅಯೋಧ್ಯೆಯ ಶ್ರೀರಾಮಚಂದ್ರ ಅರಮನೆಯ ಉದ್ಯಾನವನದಲ್ಲಿ ವೃದ್ಧನಾದ ಬ್ರಾಹ್ಮಣನೊಬ್ಬನು ರೋದಿಸುತ್ತಿದ್ದನು.

“ಅಯ್ಯೋ ರಾಮನೇ ಅಯ್ಯೋ ದೇವನೇ [illegible], ನನ್ನ ಈ ಕಂದನನ್ನು ಯಮರಾಯನೇಕೆ ಯಮಲೋಕಕ್ಕೊಯ್ದನೇ? ನಾನಾದ ಪಾಪ ಮಾಡದ ಎಳೆಯನಿಗೆ ಸಾವಿಲ್ಲ, ಎಂದೂ ಅನ್ಯಾಯವಾಗಿರಲಿಲ್ಲ, ಮೊದಲ ಬಾರಿಯ ನನ್ನ ಪುತ್ರನ ಮೇಲೆ ಮೃತ್ಯು ದೃಷ್ಟಿಯಿಂದ ಹೇಗೆ ಬಂತು?” ಎಂದು ರೋದಿಸುತ್ತ ದುಃಖಿಸುತ್ತಿದ್ದನು. ಆ ಆರ್ತನಾದವನ್ನು ಕೇಳಿ ಅರಮನೆಯಿಂದ ಹೊರಬಂದು ಅಯೋಧ್ಯೆಯ ಪ್ರಭು ಅವನ ಬಳಿ ಬರುತ್ತಿದ್ದನು. ಅದನ್ನು ಕಂಡು “ಧರ್ಮದ ಪ್ರಭುವೇ! ಪ್ರಭುವೇ ಇದೇನು ನನ್ನ ಕಂದನ? ಪ್ರಭುವೇ, ಅವನೂ ಬಾಲಕನೇ! ಎನ್ನುತ್ತ ಸಂಕಟದಿಂದ ನರಳುತ್ತಿದ್ದನು. ರಾಮನ ಬಳಿ ಬೇಗ ಬೇಗ ಬರುತ್ತ “ಅನಾಥ ರಕ್ಷಕ, ದೀನ ಬಂಧೋ, ಸರ್ವರಕ್ಷಕ ಕಾಯಿ ಕಾಯಿ” ಎನ್ನುತ್ತ ಕಾಲಿಗೆ ಬಿದ್ದನು.

ತನ್ನ ಕಾಲುಗಳಿಗೆ ಎರಗಿದ ಆ ಬ್ರಾಹ್ಮಣನನ್ನು ರಾಮನು “ಏಳಯ್ಯ ಮಹನೀಯ, ಹಿರಿಯರೇ, ಪೂಜ್ಯರೇ ನೀವು ಗುರುವಿನ ಸಮಾನರು” ಎಂದು ಎತ್ತಿ ನಿಲ್ಲಿಸಿ, ನೀವು ಯಾರು? ದುಃಖಿಸುತ್ತಿರುವುದೇಕೆ ಎಂದು ಪ್ರಶ್ನಿಸಿದನು. ಶಂಬೂಕನೆಂಬುವ ಶೂದ್ರನು ತಪಸ್ಸು ಮಾಡಿದ ಅಧರ್ಮಕ್ಕೆ ವರ್ಣಾಶ್ರಮ ಧರ್ಮದ ಉಲ್ಲಂಘನೆ ಮಾಡಿದ ಪಾಪಕ್ಕೆ ನನ್ನ ಐದು ವರ್ಷದ ಬಾಲಕನು, ನನ್ನ ಬಾಲಕನೊಬ್ಬನು ಬಲಿಯಾದನು ಎಂದು ತಿಳಿಸಿದನು. ಬ್ರಾಹ್ಮಣನ ಮಾತು ಕೇಳಿ ಚಕಿತನಾದ ಮನಸ್ಸಿನಲ್ಲಿಯೇ ವರ್ಣಾಶ್ರಮ ಪದ್ಧತಿಯಿಂದ ಗರ್ವಿತನಾ ಶಾಸ್ತ್ರ ಮೀರಿದವನಿಗೆ ಅದ ರೀತಿಗೆ ಹೇಗೆ ಬುದ್ಧಿ ಕಲಿಸುವುದು ಎಂದು ಯೋಚಿಸುತ್ತ ಮಹಾಯೋಗಿಯಾದ ಶಂಬೂಕನ ತಪಸ್ಸನ್ನು ನಿಂದಿಸಿದ ಕಾರಣ ಧರ್ಮಕ್ಕೆ ಚ್ಯುತಿ ಆಗಿ ಅವನ ಮುದ್ದು ಮಗನಿಗೆ ಅಕಾಲ ಮರಣವನ್ನು ತಂದಿದೆ. ಅವನಿಗೆ ತಾನು ಮಾಡಿದ ತಪ್ಪು ತಿಳಿಯದೇ ಶಂಬೂಕಯೋಗಿಯನ್ನು

ನಿಂದಿಸುತ್ತಿದ್ದಾನೆ ಅಂದುಕೊಂಡನು. "ರಾಮರಾಜ್ಯದೋಳ್ ಅಧರ್ಮ ಸಂಹಾರಪ ಮೃತ್ಯುವಿಜಯಂ, ಬರ್ದುಕಲ್ ಧರ್ಮಂ ಬರ್ದುಕುವನ್ ನಿನ್ನಣುಗನ್" ಎಂದು ಹೇಳುತ್ತಾ ರಾಮನು ಬ್ರಾಹ್ಮಣನೊಂದಿಗೆ ಪುಷ್ಪಕ ವಿಮಾನದಲ್ಲಿ ಶಂಬೂಕಾಶ್ರಮಕ್ಕೆ ಬರುತ್ತಾನೆ.

ಇನ್ನೂ ಮೂರನೆಯ ದೃಶ್ಯದಲ್ಲಿ ಬ್ರಾಹ್ಮಣನು ಶಂಬೂಕ ತಪಸ್ಸು ಮಾಡಿದ ಸ್ಥಳವನ್ನು ತೋರಿಸುವನು. ಆಗ ರಾಮನು ಶಂಬೂಕನಿಗೆ ಕೈ ಮುಗಿದನು. ಅದನ್ನು ಕಂಡು ಬ್ರಾಹ್ಮಣ ಬೆರಗುಗೊಂಡನು. ರಾಮ ವೃದ್ಧ ಬ್ರಾಹ್ಮಣನನ್ನು ಉದ್ದೇಶಿಸಿ ತಪಸ್ಸು ಪೂಜ್ಯನೀಯವಲ್ಲವೆ? ಅದಕ್ಕೆ ಸಮಾನವಾದುದುಂಟೆ? ತಪಸ್ಸುಗೈದವನು ಪೂಜ್ಯನಲ್ಲವೇ? ಎಂದಾಗ, ವೃದ್ಧನು ಸತ್ಯ ಎನ್ನುತ್ತಾನೆ. ಹಾಗಿದ್ದಾಗ ತಪಸ್ಸು ಮಾಡಿದವನನ್ನು ಕೊಲ್ಲುವದು ಪಾಪವಲ್ಲವೆ ಎಂದು ಬ್ರಾಹ್ಮಣನನ್ನು ಮಾತಿನ ಇಕ್ಕಟ್ಟಿನಲ್ಲಿ ಸಿಗಿಸುತ್ತಾನೆ. ಎಚ್ಚೆತ್ತುಕೊಂಡ ಬ್ರಾಹ್ಮಣನು ಶೂದ್ರರು ತಪಸ್ಸು ಮಾಡುವದು ಅಧರ್ಮ, ಈ ಶೂದ್ರತಪಸ್ವಿ ಶಿಕ್ಷೆಗೆ ಅರ್ಹನು, ಅವನ ಮೇಲೆ ಬ್ರಹ್ಮಾಸ್ತ್ರವನ್ನು ತೊಡು ಎಂದು ಶ್ರೀರಾಮನಿಗೆ ಒತ್ತಾಯಿಸುತ್ತಾನೆ. ರಾಮನು ಬ್ರಹ್ಮಾಸ್ತ್ರವನ್ನು ತೊಟ್ಟು "ಅರಸಿ ಕೊಲ್ ಅರಗುಲಿಯನ್" ಎನ್ನುತ್ತ ಪ್ರಯೋಗಿಸಿದನು. ಮಹಾಶಕ್ತಿಶಾಲಿಯಾಗಿದ್ದ ಆ ಬ್ರಹ್ಮಾಸ್ತ್ರವು ತನ್ನ ಭಯಂಕರತೆಯನ್ನು ಕಡಿಮೆ ಮಾಡಿಕೊಂಡು ವಿನೀತಭಾವದಿಂದ ಶಂಬೂಕ ಋಷಿಯನ್ನು ಸುತ್ತುವರಿದು ಅಡ್ಡಬೀಳುತ್ತದೆ.

ಅದನ್ನು ಕಂಡು ಬ್ರಾಹ್ಮಣನು ಹೇ ದಾಶರಥಿ ನೀನೆಚ್ಚ ಬ್ರಹ್ಮಾಸ್ತ್ರಮುಂ ಆಯ್ತೆ ನಿಷ್ಫಲಂ? ಎಂದು ಪ್ರಶ್ನಿಸಿದನು. ಬ್ರಹ್ಮಾಸ್ತ್ರ ನಿಷ್ಫಲವಾಗುವದಿಲ್ಲ, ಶಂಬೂಕ ಮುನಿಗೆ ಗೌರವ ಸಲ್ಲಿಸಿ, ಇತ್ತ ಬಂದು ಅಧ್ಮರಿಯಾದ ತನ್ನ ವೈರಿಯನ್ನು ಧ್ವಂಸಗೈದು ಸಫಲವಾಗುತ್ತದೆಂದನು ರಾಮ. ಅಧರ್ಮಿಯಾದ ಶೂದ್ರನನ್ನು ಕೊಲ್ಲುತ್ತದೆಯೆ ಎಂದು ಬ್ರಾಹ್ಮಣ ಕೇಳಿದಾಗ, ಅಲ್ಲ ಪೂಜ್ಯರನ್ನು ಅವಮಾನಪಡಿಸಿದ, ಶಾಸ್ತ್ರಗರ್ವಿಯಾದ, ವಿನಯರಹಿತನಾದ ನಿನ್ನನ್ನು ಎಂದು ಹೇಳಿದನು ಶ್ರೀರಾಮಚಂದ್ರ. ಆಗ, ಬ್ರಾಹ್ಮಣನು ಅನಾಥರಕ್ಷಕನೆ, ದೀನಬಂಧುವೆ ರಕ್ಷಿಸು ನನ್ನನ್ನು ಎಂದು ರಾಮನ ಕಾಲು ಹಿಡಿದು ಬೇಡಿಕೊಂಡನು. ರಾಮನು, ನೀವು ಅವಮಾನಪಡಿಸಿದ್ದು ನನ್ನನಲ್ಲ, ಶಂಬೂಕ ಮಹರ್ಷಿಯನ್ನು, ಮುನಿಯಿಂದ

ನಿಮಗೆ ರಕ್ಷಣೆ ಎನಲು, ಹಾಗೆಯೇ ಮಾಡುವೆನೆಂದು ಬ್ರಾಹ್ಮಣನು ಶಂಬೂಕ ಮಹರ್ಷಿಯ ಬಳಿ ಬಂದು ಸಾಷ್ಟಾಂಗ ನಮಸ್ಕಾರ ಮಾಡುತ್ತಾನೆ. ಆ ಸಂದರ್ಭದಲ್ಲಿ ಕಾಡೆಲ್ಲ ಸಂಭ್ರಮಿಸುತ್ತದೆ. ದೇವದುಂದುಭಿ ಮೊಳಗುತ್ತದೆ, ಹೂಮಳೆಗರೆಯುತ್ತದೆ, ಮರಣ ಹೊಂದಿದ್ದ ಬ್ರಾಹ್ಮಣಕುಮಾರನು ಮಲಗಿದ್ದವನು ಏಳುವಂತೆ ಕಣ್ಣುಜ್ಜಿಕೊಂಡು ತನ್ನ ತಂದೆಯನ್ನು ಕೂಗಿ ಕರೆಯುತ್ತಾನೆ.

ತಾತಾ-ತಾತಾ ಎಂದು ಕೂಗುತ್ತಿದ್ದ ಮಗನನ್ನು ಬ್ರಾಹ್ಮಣನು ಸಂತೋಷದಿಂದ ಅಪ್ಪಿಕೊಳ್ಳುತ್ತಾನೆ. ಮಗನೊಂದಿಗೆ ರಾಮನ ಹತ್ತಿರ ಬಂದು ಬ್ರಾಹ್ಮಣ "ಕಂದಾ, ಸೀತಾಪತಿಗೆ, ರಾಜರಾಜೇಂದ್ರಂಗೆ ಶ್ರೀರಾಮಚಂದ್ರಂಗೆ, ನಮ್ಮಿರ್ವರುಮನ್ ಪೊರೆದಂಗೆ ಕೈಮುಗಿ" ಎಂದು ಮಗನಿಗೆ ಹೇಳುವನು. ತಂದೆಯ ಮಾತಿನಂತೆ ಬಾಲಕನು ಸಂತೋಷದಿಂದ ರಾಮನಿಗೆ ನಮಸ್ಕರಿಸುವನು. ಭಕ್ತಿಭಾವದಿಂದ ತನಗೆ ಕೈಮುಗಿದ ಮುದ್ದುಕುಮಾರನನ್ನು ಶ್ರೀರಾಮಚಂದ್ರನು ಪ್ರೀತಿಯಿಂದ ಎತ್ತಿಕೊಂಡು ಮುದ್ದಾಡಿ, ಶಂಬೂಕ ಮಹರ್ಷಿಯನ್ನು ತೋರಿಸಿ, ನಮಸ್ಕರಿಸಲು ಹೇಳುವನು. ಮುಗ್ಧ ಬಾಲಕ ಶಂಬೂಕ ಮುನಿಗೆ ವಂದಿಸುವನು. ಇದರೊಂದಿಗೆ ನಾಟಕಕ್ಕೆ ತೆರೆ ಬೀಳುತ್ತದೆ.

ನಮ್ಮ ಭಾರತೀಯ ಸನಾತನ ಧರ್ಮ ವ್ಯವಸ್ಥೆಯಲ್ಲಿ ಕೆಳವರ್ಗ(ಅಸ್ಪೃಶ್ಯರು)ದವರನ್ನು ಮೇಲ್ವರ್ಗ(ಸ್ಪೃಶ್ಯರು)ದವರು ಹೇಗೆ ಶೋಷಣೆ ಮಾಡುತ್ತಾ ಬಂದಿದ್ದಾರೆಂಬುದಕ್ಕೆ ಸಾಕಷ್ಟು ನಿದರ್ಶನಗಳನ್ನು ಕೊಡಬಹುದಾಗಿದೆ. ನಮ್ಮ ದೇಶದ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲೂ ಶೋಷಣೆಯ ಅನೇಕ ಪ್ರಸಂಗಗಳಿವೆ. ವಿದ್ಯೆ, ಧ್ಯಾನ, ತಪಸ್ಸು, ಪೂಜೆ ಮೊದಲಾದವುಗಳಿಗೆ ಶೂದ್ರರು ಅನರ್ಹರು ಎನ್ನುವ ಧರ್ಮಗ್ರಂಥಗಳ, ಮಹಾಕಾವ್ಯಗಳ ವಿಚಾರ ನಿಜಕ್ಕೂ ಹಾಸ್ಯಾಸ್ಪದವೆನಿಸುತ್ತದೆ. ರಸಋಷಿಗಳು, ಮಹಾಕವಿಗಳು ಎನಿಸಿಕೊಳ್ಳುವವರು ಇಂಥ ಸನ್ನಿವೇಶಗಳನ್ನು ಉಲ್ಲೇಖಿಸುವುದು ಎಷ್ಟು ಔಚಿತ್ಯಪೂರ್ಣ ಎನ್ನುವ ಪ್ರಶ್ನೆ ಉದ್ಭವಿಸುತ್ತಿದೆ. ಅಸ್ಪೃಶ್ಯರು ತಪಸ್ಸು ಮಾಡಬಾರದು ಎಂಬುದು ನಿಯಮ. ಅದನ್ನು ಉಲ್ಲಂಘಿಸಿದರೆ ಅನಾಹುತಗಳು ಸಂಭವಿಸುತ್ತವೆ ಎನ್ನುವದು ಮೂರ್ಖರ, ಅವಿವೇಕಿಗಳ ವಿಚಾರ.

ಕನ್ನಡದಲ್ಲಿ ವೈಚಾರಿಕ ಸಾಹಿತ್ಯಕ್ಕೆ ಹೆಚ್ಚು ಪ್ರಖರತೆಯನ್ನು ತಂದುಕೊಟ್ಟವರು ಕುವೆಂಪು. ಮಹಾಕವಿ ವಾಲ್ಮೀಕಿಯವರ 'ರಾಮಾಯಣ'ದ ಉತ್ತರ ಕಾಂಡದಲ್ಲಿ ಬರುವ ಶೂದ್ರ ಶಂಬೂಕನ ಪ್ರಸಂಗ ಹಾಗೂ ಭವಭೂತಿಯ "ಉತ್ತರ ರಾಮಚರಿತ" ನಾಟಕದ ಶಂಬೂಕನ ಸನ್ನಿವೇಶ ಇವೆರಡಕ್ಕಿಂತ ಭಿನ್ನವಾಗಿ ಪುಟ್ಟಪ್ಪನವರು "ಶೂದ್ರ ತಪಸ್ವಿ" ನಾಟಕದಲ್ಲಿ ಶಂಬೂಕನ ಪಾತ್ರವನ್ನು ಚಿತ್ರಿಸಿದ್ದಾರೆ. ಧ್ಯಾನ, ತಪಸ್ಸು ಪೂಜೆ, ಆಚರಣೆ ಸಾರ್ವತ್ರಿಕ. ಯಾರೂ ಬೇಕಾದವರೂ ಮಾಡಬಹುದು, ಅದಕ್ಕೆ ವರ್ಗ, ವರ್ಣ ಮತ್ತು ಲಿಂಗಗಳ ಭೇದವಿಲ್ಲ. ಪ್ರತಿಯೊಬ್ಬರಿಗೂ ಅವನ್ನು ಆಚರಿಸುವ ಹಕ್ಕು ಇದೆ, ಸ್ವಾತಂತ್ರ್ಯವುಂಟು. ಲೋಕಕಲ್ಯಾಣಕ್ಕಾಗಿ ಸರ್ವರ ಸುಖಕ್ಕಾಗಿ ತಪಸ್ಸು, ಧ್ಯಾನ ಮೊದಲಾದ ಧಾರ್ಮಿಕ ವಿಧಿ ವಿಧಾನಗಳನ್ನು ಮಾಡಲಾಗುತ್ತದೆ. ತಪಸ್ಸು ಯಾರು ಮಾಡಿದರೇನಂತೆ? ಅದರಿಂದ ಜಗತ್ತಿಗೆ ಒಳ್ಳೆಯದಾದರೆ ಸಾಕು ಎಂಬುದು ಕುವೆಂಪು ಅವರ ಅಭಿಪ್ರಾಯ. ಅದು ನಮ್ಮೆಲ್ಲರ ವಿಚಾರವಾಗಬೇಕು.

ತಪಸ್ಸು ಮಾಡುವುದು ಪುಣ್ಯ, ಅದನ್ನು ವಿರೋಧಿಸುವುದು ಮಹಾಪಾಪ. ಶೂದ್ರ ತಪಸ್ಸು ಮಾಡುವುದರಿಂದ ಯಾರಿಗೂ ಹಾನಿಯಿಲ್ಲ. ಶಂಬೂಕನು ಶೂದ್ರನಾದರೇನು, ಮಹಾತಪಸ್ವಿ, ಅವನ ತಪಸ್ಸನ್ನು ವಿರೋಧಿಸಿದ ಕಾರಣ ಬ್ರಾಹ್ಮಣನು ಸಮಸ್ಯೆಯನ್ನು ಎದುರಿಸಬೇಕಾಯಿತು. ಆ ತಪಸ್ವಿಯನ್ನು ಅವಮಾನಪಡಿಸಿದ ತಪ್ಪಿಗಾಗಿ ತೊಂದರೆ ಅನುಭವಿಸಿದ ಬ್ರಾಹ್ಮಣ ಕೊನೆಗೆ ತನ್ನ ಪಾಪ ಪರಿಹಾರಕ್ಕಾಗಿ ಶಂಬೂಕನಿಗೆ ಕೈ ಮುಗಿದು ಕ್ಷಮೆಯಾಚಿಸುವ ಸಂದರ್ಭವನ್ನು ಕುವೆಂಪು ತುಂಬಾ ಮಹೋಜ್ವಲವಾಗಿ ಸೃಜಿಸಿದ್ದಾರೆ.

ನಾಟಕ ಕರ್ತೃಗಳಾದ ಸ್ವತಃ ಪುಟ್ಟಪ್ಪನವರೆ ನಾಟಕಕ್ಕೆ ಮುನ್ನುಡಿಯನ್ನು (2-1-1944) ಬರೆದಿದ್ದಾರೆ. ಅದರಲ್ಲಿ ಅವರು ಓದುಗರಲ್ಲಿ ಒಂದು ಬಿನ್ನಹ ಮಾಡಿಕೊಂಡಿದ್ದಾರೆ. ಅದೇನೆಂದರೆ, "ಯಾವ ಕಾರಣದಿಂದಾಗಲಿ, ಯಾವ ರೂಪದಿಂದಾಗಲಿ, ಯಾವ ಪೂರ್ವಾಗ್ರಹದಿಂದಾಗಲಿ, ಯಾವ ದುರಾಗ್ರಹದಿಂದಾಗಲಿ ಹೃದಯ ಪ್ರವೇಶ ಮಾಡುವ ದಾರಿದ್ರ್ಯವನ್ನು ದೂರೀಕರಿಸಿ, ಶುದ್ಧಬುದ್ಧಿಯ ಸಹೃದಯ ಸಹಜವಾದ ಶ್ರೀಮಂತತೆಯಿಂದ ಅದನ್ನು ಓದಿದರೆ ಕೃತಿಗೂ ಕೃತಿಕಾರನಿಗೂ ನ್ಯಾಯ ಮಾಡಿದಂತಾಗುತ್ತದೆ" ಎಂದು. ನಾಟಕ

ಪ್ರಕಟವಾದ ಮೇಲೆ ಕೆಲ ಓದುಗರಿಂದ ಉದ್ರೇಕಕಾರಿಯಾದ ಅಭಿಪ್ರಾಯಗಳು ವ್ಯಕ್ತವಾದವು. ಅವುಗಳಿಗೆ ಪ್ರತ್ಯುತ್ತರವೆಂಬಂತೆ ಪುಟ್ಟಪ್ಪನವರು 'ಶೂದ್ರತಪಸ್ವಿ ಮಾರ್ನುಡಿ'ಯನ್ನು (24-07-1947) ಬರೆದಿದ್ದಾರೆ. ಆ ಮಾರ್ನುಡಿಯ ಕೊನೆಯಲ್ಲಿ ಅವರು ವಿಮರ್ಶಕರು ಹೇಳಿದ ಲೋಕೋತ್ತರವಾದ ಮಾತನ್ನು ಒತ್ತಿ ಹೇಳಿದ್ದಾರೆ. "ಜಾತಿ ಕುಲದ ಮಾತು ಬಂದಾಗ ಮನಸ್ಸನ್ನು ಉದ್ರೇಕಕ್ಕೆ ಬಿಡದೆ ಸಮಾಧಾನದಿಂದ ಚರ್ಚಿಸುವ ಒಲುಮೆ ಸಮಾಜದ ಶ್ರೇಯಸ್ಸಿನ ಮುಖ್ಯ ಸಾಧನಗಳಲ್ಲಿ ಒಂದು" ಎಂಬುದನ್ನು ಉದ್ಧರಿಸಿದ್ದಾರೆ. "ಸಾಹಿತ್ಯದಲ್ಲಂತೂ ಅಂತಹ ಪಕ್ಷೋದ್ರೇಕ ನಿಜವಾಗಿಯೂ ಅನರ್ಥಕರ, ಹಾನಿಕರ, ರಸಭಂಗಕರ, ಕೃತಿಕಾರನ ಮೇಲೆ ಉಕ್ಕುವ ದ್ವೇಷಾಸೂಯೆಗಳಿಂದ ಕೃತಿ ಸಮಸ್ತವೂ ದ್ವೇಷಪೂರ್ಣ, ವಿಷಮಯ, ನೀರಸ, ಅಧಮ ಎಂಬಂತೆ ತೋರಿ, ಕಲೆಯ ಉದ್ದೇಶವೇ ಕೊಲೆಹೋಗುತ್ತದೆ. ಕನ್ನಡಕ್ಕೆ ಅಂತಹ ದುರ್ಗತಿ ಒದಗದಿರಲಿ" ಎಂಬ ಸದಾಶಯ ನುಡಿವಿದ್ದು ಸ್ಮರಣೀಯ.

*****

ತೂಕದ ನೆಲೆ

"ತೂಕದನೆಲ" ಡಾ. ಶಿವಲಿಂಗಪ್ಪ ಭಂಡಾರಿ ಹಾಗೂ ಡಾ. ಶಿವಸ್ವಾಮಿ. ಡಿ.ಎಸ್. ಅವರ ವಿಶಿಷ್ಟ ಹಾಗೂ ವಿಭಿನ್ನವಾದ ಸಂಪಾದನ ಕೃತಿಯಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಸಾಹಿತ್ಯ ವಲಯದಲ್ಲಿ ಹಿರಿಯ ಸಾಹಿತಿಗಳ ಬರಹವನ್ನು ಸಂಗ್ರಹಿಸಿ, ವ್ಯವಸ್ಥಿತವಾಗಿ ಜೋಡಿಸಿ, ಸಂಪಾದಿಸುವ ಹಾಗೂ ಅದನ್ನು ಕೃತಿರೂಪದಲ್ಲಿ ಹೊರತರುವ ಸುಲಭ ವಿಧಾನ ಸಧ್ಯ ಸಾಹಿತ್ಯ ವಲಯದಲ್ಲಿ ಚಾಲ್ತಿಯಲ್ಲಿದೆ. ಇದೆ ನೆಲೆಯ ಇನ್ನೊಂದು ಹೊಸವಿಧಾನವೆಂದರೆ, ಪ್ರಬುದ್ಧ ಬರಹಗಾರರಿಂದ ನಿರ್ದಿಷ್ಟ ವಿಷಯದ ಮೇಲೆ ಲೇಖನ ಬರೆಯಿಸಿ, ಲೇಖನಗಳನ್ನು ಒಂದೆಡೆ ಸಂಕಲನಗೊಳಿಸಿ, ಕೃತಿರೂಪದಲ್ಲಿ ಹೊರತರುವ ಹೊಸ ಎರಡನೆಯ ವಿಧಾನ. ಈ ವಿಧಾನಕ್ಕೆ ಹೊಂದಿಕೊಂಡು ಕೃತಿ ಸಂಪಾದನ ಕಾರ್ಯಕ್ಕೆ ಕೈಹಾಕಿ ಯಶಸ್ವಿಯಾದವರ ಆತ್ಮೀಯ ಸ್ನೇಹಿತರಾದ ಡಾ. ಶಿವಲಿಂಗಪ್ಪ ಭಂಡಾರಿ ಹಾಗೂ ಡಾ. ಶಿವಸ್ವಾಮಿ.ಡಿ.ಎಸ್.ಅವರು. ಪ್ರಸ್ತುತ ಪದವಿ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಕಾಯಕವನ್ನು ನಿಷ್ಠೆಯಿಂದ ಮಾಡುತ್ತ ಇತ್ತ ಸಾಹಿತ್ಯ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು. ಏನಾದರೊಂದು ಹೊಸಹೊಳವಿನ ವಿಚಾರವನ್ನು ಹೊರಹಾಕಿ ಮುನ್ನಡೆಯುವ ಜಾಯಮಾನದವರು. ತೂಕದ ನೆಲೆಯ ಬರಹವನ್ನು ಸಂಪಾದಿಸಿ ನಾಡಿಗೆ ಪರಿಚಯಿಸ ಹೊರಟ ಅರ್ಥಪೂರ್ಣಕಾರ್ಯ ಮಾಡಿದವರು. ಉದಯೋನ್ಮುಖ ಬರಹಗಾರರಿಗೆ ಬರಹದ ನೆಲೆಸಿಗಲೆಂಬ ಹಂಬಲ ಇರ್ವ ಸಂಪಾದಕರಿಗೆ ಇದೆ. ಹಾಗೆ ಹಿರಿಯ ತಲೆಮಾರಿನ ಬರಹಗಾರರಿಗೂ ಸಮಾನ ಗೌರವ ನೀಡಿರುವದು ಕಂಡು ಬರುತ್ತದೆ. ಸಮನ್ವಯದ ಹಾದಿಯಲ್ಲಿ ನಡೆದು. ಸುವ್ಯವಸ್ಥಿತವಾಗಿ ೩೨ ಲೇಖನಗಳನ್ನು ಹೊಂದಿಸಿದ ಲೇಖನಗಳ ಸಂಗಮವೆ "ತೂಕದನೆಲ" ಹೆಸರಿನ ಗ್ರಂಥ. ಇದು ಬೆಂಗಳೂರಿನ ಎಸ್.ಎಲ್.ಎನ್.ಪಬ್ಲಿಕೇಷನ್‌ದಿಂದ ಬೆಳಕುಕಂಡಿದೆ. ೩೨೦ ಪುಟಗಳ ವಿಸ್ತಾರದಲ್ಲಿ ಅರಳಿದ ಸುಂದರ ಕಲಾಕುಸುಮ. ಇಂತಹ ಹಲವಾರು ಕೃತಿಗಳು ಇರ್ವ ಸ್ನೇಹಿತರಿಂದ ಮುಂದೆಯೂ ಹೊರಬರಲೆಂದು ಹಾರೈಸುತ್ತೇನೆ.

ಡಾ.ವ್ಹಿ.ಬಿ.ಸಣ್ಣಸಕ್ಕರಗೌಡರ
ಯುವ ಸಾಹಿತಿ, ಧಾರವಾಡ

ರೂ. ೮೦/-